**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹುಕ್ಕೇರಿ, ಮದಿಹಳ್ಳಿ, ಗಜಬರವಾಡಿ, ಶಿರಗಾಂವ್, ಮದಮಕ್ಕನಾಳ ಮತ್ತು ಬೇನಿವಾಡ ಗ್ರಾಮಗಳ 1200 ಹೆಕ್ಟೇರ್ ಪ್ರದೇಶಕ್ಕೆ ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ನೀರಾವರಿ ಕಲ್ಪಿಸುವ 0.11 ಟಿಎಂಸಿ ನೀರಿನ ಹಂಚಿಕೆಯ ಶ್ರೀ ಅಡವಿಸಿದ್ದೇಶ್ವರ ಏತ ನೀರಾವರಿ ಯೋಜನೆಯ ರೂ.66.13 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

*****

**ಓದಲಾಗಿದೆ:**

1. ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಇವರ ಪತ್ರ ಸಂಖ್ಯೆ: ಕನೀನಿನ/ತಾಂತ್ರಿಕ/ಟಿಜಿಸಿ/1198/ 2018-19/7427, ದಿನಾಂಕ: 11.04.2019.
2. ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಇವರ ಪತ್ರ ಸಂಖ್ಯೆ: ಕನೀನಿ/ತಾಂತ್ರಿಕ/ಟಿಜಿಸಿ/1197(ಭಾಗ-2)/ 2018-19/6552, ದಿನಾಂಕ: 14.02.2020.

**ಪ್ರಸ್ತಾವನೆ:**

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಮೇಲೆ ಓದಲಾದ (1)ರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹುಕ್ಕೇರಿ, ಮದಿಹಳ್ಳಿ, ಗಜಬರವಾಡಿ, ಶಿರಗಾಂವ್, ಮದಮಕ್ಕನಾಳ ಮತ್ತು ಬೇನಿವಾಡ ಗ್ರಾಮಗಳ 1200 ಹೆಕ್ಟೇರ್ ಪ್ರದೇಶಕ್ಕೆ ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ನೀರಾವರಿ ಕಲ್ಪಿಸುವ 0.11 ಟಿಎಂಸಿ ನೀರಿನ ಹಂಚಿಕೆಯ ಶ್ರೀ ಅಡವಿಸಿದ್ದೇಶ್ವರ ಏತ ನೀರಾವರಿ ಯೋಜನೆಯ ರೂ.66.13 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತವನೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಇವರ ಮೇಲೆ ಓದಲಾದ (1)ರ ಪತ್ರದಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹುಕ್ಕೇರಿ, ಮದಿಹಳ್ಳಿ, ಗಜಬರವಾಡಿ, ಶಿರಗಾಂವ್, ಮದಮಕ್ಕನಾಳ ಮತ್ತು ಬೇನಿವಾಡ ಗ್ರಾಮಗಳ 1200 ಹೆಕ್ಟೇರ್ ಪ್ರದೇಶಕ್ಕೆ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಕಟ್ಟಿರುವ ಬಡಕುಂದ್ರಿ ಬ್ಯಾರೇಜ್‌ನ ಹಿನ್ನೀರಿನಿಂದ ಮುಂಗಾರು ಹಂಗಾಮಿಗೆ ಮಾತ್ರ ಏತ ನೀರಾವರಿ ಮೂಲಕ ನೀರಾವರಿ ಕಲ್ಪಿಸಲು ಯೋಜಿಸಲಾಗಿರುತ್ತದೆ ಎಂದು ವರದಿಸಿರುತ್ತಾರೆ.

ಮುಂದುವರೆದು ಘಟಪ್ರಭಾ ಬಲದಂಡೆ ಕಾಲುವೆ ವ್ಯಾಪ್ತಿಯಡಿ ನೀರಾವರಿಯಾಗದೇ ಅಧಿಸೂಚಿತ ಕ್ಷೇತ್ರ ಒಟ್ಟು 4095 ಹೆ. ಜಮೀನುಗಳಿಂದ ಉಳಿಯುವ ಸುಮಾರು 0.75 ಟಿಎಂಸಿ ನೀರಿನ ಲಭ್ಯತೆಗನುಗುಣವಾಗಿ ಕಲ್ಮಡಿ ಏತ ನೀರಾವರಿ ಯೋಜನೆಗೆ 0.47 ಟಿಎಂಸಿ, ಶಂಕರಲಿಂಗ ಏತ ನೀರಾವರಿ ಯೋಜನೆಗೆ 0.11 ಟಿಎಂಸಿ ಮತ್ತು 0.11 ಟಿಎಂಸಿ ಒಟ್ಟಾರೆ 0.69 ಟಿಎಂಸಿ ನೀರಿನ ಹಂಚಿಕೆಯನ್ವಯ ಶ್ರೀ ಅಡವಿಸಿದ್ದೇಶ್ವರ ಏತ ನೀರಾವರಿ ಯೋಜನೆಯ ರೂ.57.97 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ಆಡಳಿತಾತ್ಮಕ ಅನುಮೋದನೆಯನ್ನು ಕೋರಿದ್ದರು.

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ರವರ ಮೇಲೆ ಓದಲಾದ ಉಲ್ಲೇಖ (1)ರ ಪತ್ರ ದಿನಾಂಕ:08.03/11.04.2019 ರಲ್ಲಿ, ಸದರಿ ಯೋಜನೆಯ 2016-17ನೇ ಸಾಲಿನ ದರಪಟ್ಟಿಯನ್ವಯ ತಯಾರಿಸಲಾದ ರೂ.57.97 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಯನ್ನು ದಿನಾಂಕ:05.01.2018ರಂದು ಜರುಗಿದ 37ನೇ ನಿಗಮದ ಅಂದಾಜು ಪರಿಶೀಲನಾ ಸಮಿತಿಯ ಶಿಫಾರಸ್ಸಿನನ್ವಯ ದಿನಾಂಕ:07.03.2019ರಂದು ಜರುಗಿದ 87ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಿದ್ದು, ಸದರಿ ಪ್ರಸ್ತಾವನೆಗೆ ಮಂಡಳಿಯು ಅನುಮೋದನೆ ನೀಡಿ ಸರ್ಕಾರದ ಆಡಳಿತಾತ್ಮಕ ಅನುಮೋದನೆಗಾಗಿ ಶಿಫಾರಸ್ಸು ಮಾಡಿರುವುದಾಗಿ ವರದಿ ಮಾಡಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ ರವರ ಮೇಲೆ ಓದಲಾದ ಉಲ್ಲೇಖ (2)ರ ಪತ್ರದಲ್ಲಿ ಸದರಿ ಯೋಜನೆಯ ವಿವರವಾದ ಯೋಜನಾ ವರದಿಯನ್ನು ಪ್ರಸಕ್ತ ದರಗಳನ್ನು ಅಳವಡಿಸಿ ರೂ.66.13 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ:-

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 67 ಎನ್‌ಐಎನ್ 2020, ದಿನಾಂಕ: 20.11.2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಹುಕ್ಕೇರಿ, ಮದಿಹಳ್ಳಿ, ಗಜಬರವಾಡಿ, ಶಿರಗಾಂವ್, ಮದಮಕ್ಕನಾಳ ಮತ್ತು ಬೇನಿವಾಡ ಗ್ರಾಮಗಳ 1200 ಹೆಕ್ಟೇರ್ ಪ್ರದೇಶಕ್ಕೆ ಹಿರಣ್ಯಕೇಶಿ ನದಿಯಿಂದ ನೀರನ್ನು ಎತ್ತಿ ನೀರಾವರಿ ಕಲ್ಪಿಸುವ 0.11 ಟಿಎಂಸಿ ನೀರಿನ ಹಂಚಿಕೆಯ ಶ್ರೀ ಅಡವಿಸಿದ್ದೇಶ್ವರ ಏತ ನೀರಾವರಿ ಯೋಜನೆಯ ರೂ.66.13 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಸಂಖ್ಯೆ: ಆಇ 230 ಆಕೋ-1/ 2020,(ಇ-ಆಫೀಸ್) ದಿನಾಂಕ:05.11.2020ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

20/11/2020

(ರವೀಂದ್ರ ಕೊಂಡ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-4) (ಪ್ರ)
ಜಲ ಸಂಪನ್ಮೂಲ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು ಇವರಿಗೆ ಮುಂದಿನ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸುವಂತೆ ಹಾಗೂ ಪ್ರಕಟಿಸಿದ 100 ಪ್ರತಿಗಳನ್ನು ಇಲಾಖೆಗೆ ಕಳುಹಿಸಿಕೊಡುವಂತೆ ಕೋರಲಾಗಿದೆ.

**ಪ್ರತಿಯನ್ನು:**

1) ಮಹಾಲೇಖಪಾಲರು (ಎ & ಇ ) ಕರ್ನಾಟಕ, ಬೆಂಗಳೂರು.
2) ಮಹಾಲೇಖಪಾಲರು (ಇ & ಆರ್ ಎಸ್ ಎ ) ಕರ್ನಾಟಕ, ಬೆಂಗಳೂರು.
3) ಮಹಾಲೇಖಪಾಲರು (ಜಿ & ಎಸ್ ಎಸ್ ಎ ) ಕರ್ನಾಟಕ, ಬೆಂಗಳೂರು.
4) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
5) ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
6) ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ ಶಾಖೆ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟ ಸಂಖ್ಯೆ :ಸಿ:548, ದಿನಾಂಕ:12.11.2020ರ ಮೇರೆಗೆ)
7) ಸರ್ಕಾರದ ಉಪ ಕಾರ್ಯದರ್ಶಿ, (ಸಚಿವ ಸಂಪುಟ ಶಾಖೆ), (ಸಚಿವ ಸಂಪುಟ ಸಂಖ್ಯೆ:ಸಿ:548, ದಿನಾಂಕ:12.11.2020ರ ಮೇರೆಗೆ)
8) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
12) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
13) ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
14) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
15) ಮುಖ್ಯ ಇಂಜಿನಿಯರ್, ಕರ್ನಾಟಕ ನೀರಾವರಿ ನಿಗಮ ನಿಯಮಿತ ನೀರಾವರಿ (ಉತ್ತರ) ಬೆಳಗಾವಿ.
16) ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು,
17) ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ ( ಆರ್ಥಿಕ ಕೋಶ), ವಿಧಾನಸೌಧ, ಬೆಂಗಳೂರು.
18) ಸರ್ಕಾರದ ಉಪ ಕಾರ್ಯದರ್ಶಿ (ಕೆಬಿಜೆಎನ್), ಜಲ ಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
19) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
20) ನಿರ್ದೇಶಕರು, ರಾಜ್ಯ ಪತ್ರಾಗಾರ ಇಲಾಖೆ, ವಿಕಾಸಸೌಧ, ಬೆಂಗಳೂರು, 10 ಪ್ರತಿಗಳು.
21) ತಾಂತ್ರಿಕ ಸಹಾಯಕರು, ಜಲಸಂನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
22) ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿ.

******